ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 19–08–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಿದ್ಧಪಡಿಸಿರುವ ವಿಶೇಷ ವರದಿ – 2015 ಅನ್ನು ರಾಜ್ಯದ ಮುಖ್ಯಮಂತ್ರಿಗಳಿಗೆ ಸಲ್ಲಿಕೆ | 20–08–2015 ಗುರುವಾರ ಬೆಳಗ್ಗೆ 9–15 ಗಂಟೆಗೆ | ಮುಖ್ಯಮಂತ್ರಿಗಳ ಕೊಠಡಿ, 3ನೇ ಮಹಡಿ, ವಿಧಾನಸೌಧ, ಬೆಂಗಳೂರು |

ನಿರ್ದೇಶಕರ ಪರವಾಗಿ

# ಮಾಧ್ಯಮದವರ ಗಮನಕ್ಕೆ

**2015** ರ ಆಗಸ್ಟ್ **22** ರಂದು ನಡೆಯುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆಗೆ ಸಂಬಂಧಿಸಿದಂತೆ ಮಾಧ್ಯಮ ಪ್ರತಿನಿಧಿಗಳು ಚುನಾವಣಾ ಮತಗಟ್ಟೆ ಮತ್ತು ಮತ ಎಣಿಕೆ ಕೇಂದ್ರಗಳಿಗೆ ತೆರಳಲು ಅನುಕೂಲವಾಗುವಂತೆ ದಿನಪತ್ರಿಕೆ ಮತ್ತು ಸುದ್ದಿ ವಾಹಿನಿಗಳ ಪ್ರತಿನಿಧಿಗಳು ಮಾತ್ರ ತಮ್ಮ ಸಂಸ್ಥೆಯ ಸುದ್ದಿ ಮುಖ್ಯಸ್ಥರ ಶಿಫಾರಸ್ಸು ಪತ್ರವನ್ನು ಸಲ್ಲಿಸಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ವಿಭಾಗದಲ್ಲಿ ದಿನಾಂಕ **20–8–2015** ರಂದು ಬೆಳಿಗ್ಗೆ **10–00** ಗಂಟೆಯಿಂದ ಸಂಜೆ **5–00** ಗಂಟೆವರೆಗೆ ಚುನಾವಣೆಗೆ ಸಂಬಂಧಿಸಿದ ರಹದಾರಿ ಪತ್ರ ಪಡೆದುಕೊಳ್ಳಬಹುದಾಗಿದೆ.

**ವಿಶೇಷ ಸೂಚನೆ:**

**ಚುನಾವಣಾ ರಹದಾರಿ ಪತ್ರ ಪಡೆಯಲು ಎರಡು ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರ ನೀಡುವುದು ಕಡ್ಡಾಯವಾಗಿದೆ.**

ನಿರ್ದೇಶಕರು.

**ಪತ್ರಿಕಾ ಪ್ರಕಟಣೆ**

# ಡಿ. ದೇವರಾಜ ಅರಸು ಜನ್ಮ ಶತಮಾನೋತ್ಸವ

ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)

ಡಿ. ದೇವರಾಜ ಅರಸು ಜನ್ಮ ಶತಮಾನೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಗಸ್ಟ್ 20 ರಂದು ಮೈಸೂರಿನಲ್ಲಿ ಏರ್ಪಡಿಸಲಾಗಿದೆ.

ಡಿ. ದೇವರಾಜ ಅರಸು ಜನ್ಮ ಶತಮಾನೋತ್ಸವದ ಅಂಗವಾಗಿ ಬೆಳಿಗ್ಗೆ 9-00 ಗಂಟೆಗೆ ಬೆಂಗಳೂರು ವಿಧಾನ ಸೌಧದ ಆವರಣ (ಪಶ್ಚಿಮದ್ವಾರ) ದಲ್ಲಿ ದೇವರಾಜ ಅರಸು ಅವರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರು ಮಾಲಾರ್ಪಣೆ ಮಾಡುವರು.

ಅದೇ ದಿನ ಬೆಳ್ಳಿಗೆ 11-15 ಗಂಟೆಗೆ ಮೈಸೂರು ಜಿಲ್ಲೆ ಹುಣಸೂರು ಪಟ್ಟಣದಲ್ಲಿ ಡಿ. ದೇವರಾಜ ಅರಸು ಅವರ ಪ್ರತಿಮೆಗೆ ಮಾಲಾರ್ಪಣೆ ಹಾಗೂ ದೇವರಾಜು ಅರಸು ಭವನ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಂಕುಸ್ಥಾಪನೆ ನೆರವೇರಿಸುವರು.

ಅಂದು ಮಧ್ಯಾಹ್ನ 12 ಗಂಟೆಗೆ ಹುಣಸೂರು ತಾಲ್ಲೂಕು ಕಲ್ಲಹಳ್ಳಿ ಪುಣ್ಯಭೂಮಿಯಲ್ಲಿ ಗೌರವಾರ್ಪಣೆ ಹಾಗೂ ಕಲ್ಲಹಳ್ಳಿಯನ್ನು ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರದಿಂದ ದತ್ತು ಸ್ವೀಕಾರ ಘೋಷಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹುಣಸೂರು ಕ್ಷೇತ್ರದ ವಿಧಾನಸಭಾ ಸದಸ್ಯ ಹೆಚ್.ಪಿ. ಮಂಜುನಾಥ್ ವಹಿಸುವರು.

ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಅಂದು ಮಧ್ಯಾಹ್ನ 3-00 ಗಂಟೆಗೆ ಹಮ್ಮಿಕೊಂಡಿರುವ ಡಿ. ದೇವರಾಜ ಅರಸು ಜನ್ಮ ಶತಮಾನೋತ್ಸವ ಮತ್ತು ದೇವರಾಜ ಅರಸು ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟನೆ ಹಾಗೂ ಪ್ರಶಸ್ತಿ ಪ್ರದಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸುವರು.

ಈ ಸಮಾರಂಭದಲ್ಲಿ ಕಂದಾಯ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ವಿ. ಶ್ರೀನಿವಾಸ್ ಪ್ರಸಾದ್ ಹಾಗೂ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ಉಪಸ್ಥಿತರಿರುವರು. ಚಾಮರಾಜ ಕ್ಷೇತ್ರದ ವಿಧಾನಸಭಾ ಸದಸ್ಯ ವಾಸು ಅವರು ಅದ್ಯಕ್ಷತೆವಹಿಸುವರು.

ಸಮಾರಂಭದಲ್ಲಿ ಕೇಂದ್ರ ಸರ್ಕಾರದ ಸಚಿವರುಗಳು, ರಾಜ್ಯ ಸರ್ಕಾರದ ಸಚಿವರುಗಳು, ಭಾರತದ ಮಾಜಿ ಪ್ರಧಾನಿ, ರಾಜ್ಯದ ಮಾಜಿ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರುಗಳು, ಸಂಸತ್ ಸದಸ್ಯರು, ಶಾಸಕರುಗಳು ಜಿಲ್ಲಾ ಪಂಚಾಯತ್ ಅಧ್ಯಕ್ಷರು ಉಪಾಧ್ಯಕ್ಷರು. ಮೇಯರ್‌ರವರು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ಬಾಬು:ಜಿಪಿಆರ್.

# ಮೈಸೂರಿನಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿಯಿಂದ ಚಲನಚಿತ್ರ ರಸಗ್ರಹಣ ಶಿಬಿರ

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)**

**ಪೂನಾದ ಪ್ರತಿಷ್ಠಿತ ರಾಷ್ಟ್ರೀಯ ಚಲನಚಿತ್ರ ಭಂಡಾರದ ಸಹಯೋಗದಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿಯು ಸೆಪ್ಟೆಂಬರ್ 21 ರಿಂದ 28 ರವರೆಗೆ ಮೈಸೂರಿನಲ್ಲಿ ಒಂದು ವಾರದ ಚಲನಚಿತ್ರ ರಸಗ್ರಹಣ ಶಿಬಿರ ಏರ್ಪಡಿಸುತ್ತಿದೆ** ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

. ಈ ಕಾರ್ಯಾಗಾರದಲ್ಲಿ 60 ಮಂದಿ ಆಸಕ್ತರಿಗೆ ಭಾಗವಹಿಸಲು ಅವಕಾಶವಿದ್ದು, ರೂ. 6,000/- (ಆರು ಸಾವಿರ ಮಾತ್ರ) ಕೋರ್ಸ್ ಶುಲ್ಕ ನಿಗದಿಪಡಿಸಲಾಗಿದೆ. ಕಾರ್ಯಾಗಾರವನ್ನು ಸಂಪೂರ್ಣವಾಗಿ ಪೂನಾದ ರಾಷ್ಟ್ರೀಯ ಚಲನಚಿತ್ರ ಭಂಡಾರವೇ ವಿನ್ಯಾಸಗೊಳಿಸಿದ್ದು, ಸಂಪನ್ಮೂಲ ವ್ಯಕ್ತಿಗಳು ಹಾಗೂ ತಾಂತ್ರಿಕ ಸಹಕಾರವನ್ನು ಅಕಾಡೆಮಿ ನೀಡಲಿದೆ. ಅರ್ಜಿ ಸಲ್ಲಿಸಲು ಕೊನೆ ದಿನಾಂಕ 2015 ರ ಸೆಪ್ಟೆಂಬರ್ 5 ಆಗಿದ್ದು ಅರ್ಜಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ಚಲನಚತ್ರ ಅಕಾಡೆಮಿ, ಬಾದಾಮಿ ಹೌಸ್, ನರಸಿಂಹರಾಜ ಸ್ಕೇರ್, ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಎದುರು, ಬೆಂಗಳೂರು-2 ಇವರಿಗೆ ತಲುಪಿಸಬೇಕು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಂತರ್ಜಾಲ http://www.kcainfo.com ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಂತರ್ಜಾಲ http://www.karnatakavarthe.org ಯಿಂದ ಅರ್ಜಿಗಳನ್ನು ಡೌನಲೋಡ್ ಮಾಡಿಕೊಳ್ಳಬಹುದು. ಅಕಾಡೆಮಿ ಕಚೇರಿಯಿಂದ, ಉಪ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಧನ್ವಂತ್ರಿ ರಸ್ತೆ, ಮೈಸೂರು ಕಚೇರಿಯಿಂದ ಹಾಗೂ ಮೈಸೂರು ಫಿಲ್ಮ್ ಸೊಸೈಟಿಯಿಂದ ಅರ್ಜಿಗಳನ್ನು ಉಚಿತವಾಗಿ ಪಡೆದುಕೊಳ್ಳಬಹುದು.

ಅರ್ಜಿ ಸಲ್ಲಿಸುವವರು 18 ವರ್ಷ ಮೇಲ್ಪಟ್ಟು ಇರಬೇಕು ಹಾಗೂ ಸಿನಿಮ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರಬೇಕು. ಅರ್ಜಿಯ ಜೊತೆ ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಹೆಸರಿನಲ್ಲಿ ಪಡೆದ ರೂ. 6,000/- ಡಿ.ಡಿ. ಯನ್ನು ಲಗತ್ತಿಸಬೇಕು.

ಸಿನಿಮಾ ಇತಿಹಾಸ, ಸಂವಹನ ಹಾಗೂ ಕಲಾ ಮಾಧ್ಯಮವಾಗಿ ಸಿನಿಮಾ ಅಧ್ಯಯನ, ಸಿನಿಮಾದ ವಿವಿಧ ಆಯಾಯಮಗಳು, ಭಾರತೀಯ ಹಾಗೂ ವಿಶ್ವ ಸಿನಿಮಾದ ಅತ್ಯುತ್ತಮ ಚಿತ್ರಗಳ ವಿಶ್ಲೇಷಣಾತ್ಮಕ ಅಧ್ಯಯನ ಡಿಜಿಟಲ್ ತಂತ್ರಜ್ಞಾನ ಹಾಗೂ ಡಿಜಿಟಲ್ ಸಿನಿಮಾ ತಯಾರಿಕೆ ವಿಧಾನಗಳನ್ನು ಕಾರ್ಯಾಗಾರ ಒಳಗೊಂಡಿರುತ್ತದೆ. ದೇಶದ ಹೆಸರಾಂತ ಸಿನಿಮಾ ತಂತ್ರಜ್ಞರು, ನಿರ್ದೇಶಕರು, ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸುವರು.

ಬಾಬು/ಕೆಎಂ

# Karnataka Chalana Chitra Academy organizing Film Appreciation Course at Mysuru

**Bangalore, August 19 (Karnataka Information)**

Karnataka Chalana Chitra Academy in association with the National Film Archive of India, Pune will be holding a weeklong **Film Appreciation Course** from 21st to 28th September, 2015 at Mysuru says Sri H.B. Dinesh, Registrar Karnataka Chalana Chitra Academy.

The course is open for the people above 18 years age who are interested in film studies. The curriculum includes theoretical study of the art and history of cinema, development of cinema as a medium of art and communication and various other aspects of the medium. Classics from both Indian and International cinema will be used for critical analysis and study. The course also includes advent of digital technology and the process of digital filmmaking

The course will be conducted from 9.30 AM to 7.30 PM. The medium of instruction will be English. Course fee is : Rs. 6000/- which includes lunch & snacks/tea/coffee. Arrangements are being made to provide accommodation at concessional rates for the outstation participants. Since we have only limited seats interested persons are requested to contact us at the earliest convenience. The curriculum of the course is designed by the NFAI, the premier institution who are conducting this course for over four decades now. The faculty will include eminent filmmakers, film technicians, film critics and historians who are well experienced in this field.

Application in the prescribed form to be sent along with the course fee {DD} Rs. 6000/- should reach the Karnataka Chalana Chitra Academy , Badami House, NR Square , Bangalore – 560002. to reach us before 5th September 2015. The prescribed application forms can be obtained from the KCA Bangalore, , and also from the Information Department Mysore, and Mysore Film Society, Mysore. Application form can also be obtained through email: chalanachitraacademy @gmail.com. Further details can be obtained from :Karnataka Chalanachitra Academy, Badami House , OPP. BBMP, NR Square, Bengaluru -560002
Phone : 080- 22133410. E-mail – chalanachitraacademy@gmail.com
babu/km

# ಪದವಿಪೂರ್ವ ಶಿಕ್ಷಣಕ್ಕೆ ಇಲಾಖಾ ಪಠ್ಯಪುಸ್ತಕ ಕಡ್ಡಾಯ

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)**

ಪದವಿಪೂರ್ವ ಶಿಕ್ಷಣ ಇಲಾಖೆಯು 2012–13 ನೇ ಸಾಲಿನಿಂದ ಪ್ರಥಮ ಪಿಯುಸಿ ಮತ್ತು 2013–14ನೇ ಸಾಲಿನಿಂದ ದ್ವಿತೀಯ ಪಿಯುಸಿ ತರಗತಿಗಳಿಗೆ NCERT ಪಠ್ಯ ಪುಸ್ತಕಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ ಅದೇ ರೀತಿ ಇತರೆ ವಿಷಯಗಳಿಗೆ NCF-2005ರ ಆಶಯದಂತೆ ವಿಷಯತಜ್ಞರಿಂದ ಪಠ್ಯಕ್ರಮ ಸಿದ್ಧಗೊಳಿಸಿ, ಇಲಾಖೆಯು ನಿಗದಿತ ಪಠ್ಯಪುಸ್ತಕಗಳನ್ನು (Prescribed Text Books) ಮುದ್ರಿಸಿ ಪ್ರಕಟಿಸಿದೆ. **ಪರೀಕ್ಷಾ ಪ್ರಶ್ನೆ ಪತ್ರಿಕೆಗಳನ್ನು ಇಲಾಖೆ ಸಿದ್ಧಪಡಿಸಿದ ಪಠ್ಯಕ್ರಮ/ಪಠ್ಯಪುಸ್ತಕಗಳನ್ನು ಆಧರಿಸಿ ರಚಿಸಲಾಗುತ್ತದೆ. ಆದ್ದರಿಂದ, ರಾಜ್ಯದಲ್ಲಿ ಪದವಿಪೂರ್ವ ಶಿಕ್ಷಣ ನೀಡುವ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳು ಬೋಧನೆ ಮಾಡುವಾಗ ಇಲಾಖಾ ಪಠ್ಯಪುಸ್ತಕಗಳನ್ನೇ ಕಡ್ಡಾಯವಾಗಿ ಅನುಸರಿಸಲು ಸೂಚಿಸಿದೆ.**

ಬೇರೆ ಬೇರೆ ಪಠ್ಯಪುಸ್ತಕಗಳನ್ನು ಆಧರಿಸಿ ಬೇರೆ ವಿಧಾನದಲ್ಲಿ ಬೋಧಿಸಿದಲ್ಲಿ ಪರೀಕ್ಷಾ ವೇಳೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳೂ ಸಹ ಗೊಂದಲಕ್ಕೆ ಸಿಲುಕುವ ಸಂಭವವಿದೆ. ಈ ಸನ್ನಿವೇಶಕ್ಕೆ ಪದವಿಪೂರ್ವ ಶಿಕ್ಷಣ ಇಲಾಖೆಯು ಹೊಣೆಯಲ್ಲ.

**ಆದ್ದರಿಂದ ವಿದ್ಯಾರ್ಥಿಗಳು, ಪೋಷಕರು, ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಕಾಲೇಜು ಆಡಳಿತ ಮಂಡಳಿಗಳು ಇಲಾಖೆಯ ಸೂಚನೆಗೆ ಬದ್ಧವಾಗಿರತಕ್ಕದ್ದು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪಠ್ಯಪುಸ್ತಕಗಳನ್ನೇ ಬೋಧಿಸತಕ್ಕದ್ದು.**
**ಬಾಬಿ/ಕೆಎಂ**

# ಕನ್ನಡ ಪುಸ್ತಕ ಬಹುಮಾನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)**

**ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ 2014ನೇ ಸಾಲಿನಲ್ಲಿ (ಜನವರಿ 2014 ರಿಂದ ಡಿಸೆಂಬರ್ 2014 ರ ಅವಧಿಯಲ್ಲಿ ಪ್ರಕಟವಾದ ಕೃತಿಗಳು) ಕನ್ನಡದಲ್ಲಿ ಪ್ರಕಟವಾದ ಕೃತಿಗಳಿಗೆ, ಅವುಗಳ ಮುದ್ರಣ, ಮುಖಪುಟ ವಿನ್ಯಾಸ, ಗುಣಮಟ್ಟವನ್ನು ಪರಿಗಣಿಸಿ, ಪ್ರಕಾಶಕರಿಗೆ 2014ನೇ ಸಾಲಿನ ‘ಕನ್ನಡ ಪುಸ್ತಕ ಸೊಗಸು – 2014’** ಬಹುಮಾನಗಳನ್ನು ನೀಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. (ಪ್ರಥಮ, ದ್ವಿತೀಯ, **ತೃತೀಯ , ಚತುರ್ಥ,** ಐದನೆಯ ಹಾಗೂ ಮಕ್ಕಳ ಪುಸ್ತಕಗಳಿಗೆ ಬಹುಮಾನಗಳು) **ಆಸಕ್ತರು ಪುಸ್ತಕದ ಹೆಸರು, ಲೇಖಕರ ಹೆಸರು, ಪ್ರಕಟವಾದ ವರ್ಷ, ಪ್ರಕಾಶಕರ ಹೆಸರು, ಮುಖ ಪುಟ ವಿನ್ಯಾಸಕರ ಹೆಸರು ಹಾಗೂ ಪೂರ್ಣ**

ವಿಳಾಸ – ಈ ಎಲ್ಲಾ ವಿವರಗಳೊಂದಿಗೆ ಪುಸ್ತಕದ ಎರಡು ಪ್ರತಿಗಳನ್ನು ದಿನಾಂಕ: 14–09–2015 ರೊಳಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು – 560 002 ಈ ವಿಳಾಸಕ್ಕೆ ಕಳುಹಿಸಿಕೊಡಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ. ಸಿ. ರಸ್ತೆ, ಬೆಂಗಳೂರು – 560 002 – ವೆಬ್‌ಸೈಟ್ www.kannadapustakapradhikara.com ದೂರವಾಣಿ ಸಂಖ್ಯೆ 080–22484516/22107704 – ಇಲ್ಲಿ ಸಂಪರ್ಕಿಸಬಹುದಾಗಿದೆ.

ಬಾಬು:ಜಿಪಿಆರ್